ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಪಾವಗಡ ನ್ಯಾಯಾಲಯ

ಓ.ಎಸ್. ಸಂಖ್ಯೆ **152/2020**

ದಿನಾಂಕ **13.03.2026** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಿ.ಡಬ್ಲ್ಯೂ-1

<u>ಮುಂದುವರೆದ ಪಾಟೀ ಸವಾಲುಃ **1** ನೇ ಪ್ರತಿವಾದಿಯ ಪರ ಶ್ರೀ.ಎಸ್.ಎನ್.ಎಂ ವಕೀಲರಿಂದಃ</u>

3. ದಾವಾ ಸ್ವತ್ತಿನಲ್ಲಿ ಅಡಿಕೆ ತೋಟ ಇದೆ, ಮೊದಲ ಭಾಗ ಜಯಲಕ್ಷ್ಮಮ್ಮನ ಜಾಗ, ಎರಡನೇ ಭಾಗ ಎನ್.ವೀರಣ್ಣನ ಭಾಗ ಮತ್ತು 3 ನೇ ಭಾಗ ಪುಟ್ಟಮ್ಮನ ಭಾಗ ಎಂದರೆ ಸಾಕ್ಷಿ 4 ಭಾಗ ಮಾಡಿಕೊಂಡು ಮೊದಲನೆ ಭಾಗವನ್ನು ದಾರಿಗಾಗಿ ಬಿಟ್ಟಿದ್ದಾರೆ. ಉಳಿದಂತೆ ಮೂರು ಭಾಗಗಳನ್ನು 1 ರಿಂದ 3 ನೇ ಪ್ರತಿವಾದಿಗಳು ವಿಭಾಗ ಮಾಡಿಕೊಂಡಿದ್ದಾರೆ. ದಾವಾ ಸ್ವತ್ತಿನ ದಕ್ಷಿಣಕ್ಕೆ ಜಂಗಮರಹಳ್ಳಿಯಿಂದ ಹೊಸಹಳ್ಳಿಗೆ ಹೋಗುವ ರಸ್ತೆ ಇದೆ ಎಂದರೆ ಸರಿ. ಸದರಿ ರಸ್ತೆ ಹೊಸಹಳ್ಳಿಯವರೆಗೆ ಇದೆ. ಸಾಕ್ಷಿಗೆ ಎರಡು ಭಾವಚಿತ್ರ ಗಳನ್ನು ತೋರಿಸಲಾಯಿತು ಸಾಕ್ಷಿ ಅದರಲ್ಲಿರುವ ರಸ್ತೆ ಹೊಸಹಳ್ಳಿಗೆ ಹೋಗುವ ರಸ್ತೆ ಎಂದು ನುಡಿಯುತ್ತಾರೆ. ಅವುಗಳನ್ನು ನಿಡಿ-1, 2 ಎಂದು ಗುರುತಿಸಲಾಯಿತು. ಸಾಕ್ಷಿಗೆ ಎರಡು ಭಾವಚಿತ್ರ ಗಳನ್ನು ತೋರಿಸಲಾಯಿತು. ಸಾಕ್ಷಿ ಅದರಲ್ಲಿರುವ ರಸ್ತೆ ಹೊಸಹಳ್ಳಿಗೆ ಹೋಗುವ ರಸ್ತೆ ಎಂದು ನುಡಿಯುತ್ತಾರೆ. ಅವುಗಳನ್ನು ನಿಡಿ-3, 4 ಎಂದು ಗುರುತಿಸಲಾಯಿತು.

4. ದಾವಾ ಸ್ವತ್ತಿನ ಉತ್ತರಕ್ಕೆ ಸಿಡಿಗಪ್ಪ, ಭೀಮೇಗೌಡ, ಗೊಂಚಗಾರ ಹೊನ್ನೇಶ ರವರ ಜಮೀನಿಗೆ ಹೋಗಲು ನಿಡಿ-1 ರಿಂದ 4 ರಲ್ಲಿ ಕಾಣುವ ರಸ್ತೆ ಮೂಲಕ ಹಾದುಹೋಗಬೇಕು ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ಜಮೀನಿನ ಪೂರ್ವಕ್ಕೆ ಖಾಲಿ ಜಾಗ ಇದೆ ಎಂದರೆ ಸರಿ. ಅದರಲ್ಲಿ ಮಣ್ಣಿನ ದಿಬ್ಬ, ಹುಣಸೆ ಮರ ಇದೆ ಎಂದರೆ ಸಮಾಧಿ ಇದೆ ಮತ್ತು ಅದೆ ದಾರಿಯಲ್ಲಿ ನಾವು ಓಡಾಡುತ್ತೇವೆ. ಸಮಾಧಿಯ ಹತ್ತಿರ ಯಾವುದೇ ರಸ್ತೆ ಇಲ್ಲ ಎಂದರೆ ಸರಿಯಲ್ಲ. ಅದೇ ರಸ್ತೆಯಲ್ಲಿ ನಾವು ಓಡಾಡುತ್ತೇವೆ. 2 ನೇ ಪ್ರತಿವಾದಿ 1 ನೇ ಪ್ರತಿವಾದಿಯ ಚಿಕ್ಕಪ್ಪ ಎಂದರೆ ಸರಿ. 2 ನೇ ಪ್ರತಿವಾದಿ 1 ನೇ ಪ್ರತಿವಾದಿಯ ವಿರುದ್ಧ ದಿಬ್ಬದ ಜಾಗ ನಮಗೆ

ಬರಬೇಕು ಎಂದು ದಾವೆ ಸಲ್ಲಿಸಿದ್ದರು ಎಂದರೆ ಸರಿ. ಸದರಿ ದಾವೆಯಲ್ಲಿ ದಿಬ್ಬದ ಜಾಗ ಕೊಡಲು ಬರುವುದಿಲ್ಲ ಎಂದು ಆದೇಶವಾಗಿತ್ತು ಎಂದರೆ ಸರಿಯಲ್ಲ.

5. ಸುಮಾರು 20-25 ವರ್ಷದಿಂದ ನನಗೂ ಪ್ರತಿವಾದಿಗಳಿಗೂ ವೈಶಮ್ಯ ಇದೆ ಎಂದರೆ ಸರಿಯಲ್ಲ. ನನಗೆ ಪ್ರತಿವಾದಿಗಳ ಮೇಲೆ ದ್ವೇಷ ಇದ್ದ ಕಾರಣ ಹೊಸದಾಗಿ ರಸ್ತೆ ಬಿಡಿಸಿಕೊಳ್ಳಲು ಈ ದಾವೆ ಸಲ್ಲಿಸಿದ್ದೇನೆ ಎಂದರೆ ಸುಳ್ಳು. ರಸ್ತೆ ಬೇಕಾಗಿದ್ದರಿಂದ ದಾವೆ ಸಲ್ಲಿಸಿದ್ದೇನೆ. ನನಗೆ ಸುಡುಗಾಡು ತೋಪಿನಲ್ಲಿ ತಿರುಗಾಡಲು ರಸ್ತೆ ಇದ್ದರೂ ನಾನು ಪ್ರತಿವಾದಿಗಳ ಮೇಲೆ ದ್ವೇಷ ತಿರಿಸಿಕೊಳ್ಳಲು ರಸ್ತೆ ಕೇಳುತ್ತಿದ್ದೇನೆ ಎಂದರೆ ಬಾವಿ ಕಡೆ ಹೋಗಲು ನನಗೂ ಮತ್ತು ಪ್ರತಿವಾದಿಗಳಿಗೂ ರಸ್ತೆ ಬೇಕು ಆದ್ದರಿಂದ ಕೇಳುತ್ತಿದ್ದೇನೆ. ನಾನು ಹಾಜರುಪಡಿಸಿದ ದಾಖಲೆಯಲ್ಲಿ ರಸ್ತೆ ಇದೆ ಎಂದು ಬರೆಯಲಾಗಿದೆಯಾ ಎಂದರೆ ಬರೆದಿದೆ. ನಾನು ಹಾಜರುಪಡಿಸಿದ ಯಾವುದೇ ದಾಖಲೆಗಳಲ್ಲಿ ಪ್ರತಿವಾದಿಗಳ ಜಮೀನಿನಲ್ಲಿ ನನಗೆ ದಾರಿ ಹಕ್ಕು ಇದೆ ಎಂದು ಬರೆದಿದೆಯಾ ಎಂದರೆ ಸಾಕ್ಷಿ ನನಗೆ ದಾರಿ ಹಕ್ಕು ಇದೆ ಎಂದು ನುಡಿಯುತ್ತಾರೆ.

6. ದಾವಾ ಸ್ವತ್ತು ಸ.ನಂ.2 ಮತ್ತು ಸ.ನಂ.10 ನನ್ನ ತಾತನಿಗೆ ಸೇರಿದ್ದು ಎಂದು ಸೂಚಿಸಲು ದಾಖಲೆ ಹಾಜರು ಮಾಡಿದ್ದೀರಾ ಎಂದರೆ ಒಂದೆ ಕುಟುಂಬಕ್ಕೆ ಸೇರಿದ್ದು ಎಂದು ಸೂಚಿಸಲು ಸ.ನಂ.2, 10, 11 ರ ಟಿಪ್ಪಣಿ ದಾಖಲೆಯನ್ನು ಹಾಜರು ಮಾಡಿದ್ದೇನೆ. ಸ.ನಂ.10, ಸ.ನಂ.2 ರ ಉತ್ತರಕ್ಕೆ ಇದೆ. ಸ.ನಂ.2 ರ ನಂತರ ರಸ್ತೆ ಇದೆ ಹಾಗೂ ರಸ್ತೆಯಿಂದ ನನ್ನ ಜಮೀನಿಗೆ ಸುತ್ತುಕೊಂಡು ಹೋಗಬೇಕು ಎಂದು ದುರುದ್ದೇಶದಿಂದ ಪ್ರತಿವಾದಿಗಳ ಮೇಲೆ ದಾವೆ ಸಲ್ಲಿಸಿದ್ದೇನೆ ಎಂದರೆ ಸುಳ್ಳು.

<u>ಮರು ವಿಚಾರಣೆಃ ಇಲ್ಲ</u>
(ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ . ಹೇ. ಕೇ. ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ. ಎಫ್. ಸಿ.,
ಪಾವಗಡ